# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ, ಉಪಾಧ್ಯಕ್ಷರು, ಮಾದನಹಿಪ್ಪರಗಾ ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) 48(4) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ ಜಿಪಕ.ಪಶಾ.ಗ್ರಾಪಂ/74/2016-17/1053 ದಿನಾಂಕ:23.01.2017
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:891:ಗ್ರಾಪಂಅ:2016, ದಿನಾಂಕ:.14.02.2017 ರ ಕಾರಣ ಕೇಳುವ ನೋಟಿಸ್ಸು.
3. ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ, ಉಪಾಧ್ಯಕ್ಷರು, ಇವರು ಕಾರಣ ಕೇಳುವ ನೋಟಿಸ್‌ಗೆ ನೀಡಿರುವ ಲಿಖಿತ ಹೇಳಿಕೆ ದಿನಾಂಕ: 28.02.2017.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ದಿನಾಂಕ:23.01.2017 ರಲ್ಲಿ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಕಲಬುರಗಿ ಜಿಲ್ಲೆ, ರವರ ಪತ್ರದಲ್ಲಿ ಆಳಂದಾ ತಾಲ್ಲೂಕಿನ, ಮಾದನಹಿಪ್ಪರಗಾ ಗ್ರಾಮ ಪಂಚಾಯತಿಯ ಉಪಾಧ್ಯಕ್ಷರಾದ ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ, ರವರು ಕಾನೂನು ಬಾಹಿರವಾಗಿ ಗ್ರಾಮ ಪಂಚಾಯಿತಿಯ ನೀರು ಸರಬರಾಜು ಮತ್ತು ನೀರು ನಿರ್ವಹಣೆ ಖಾತೆಯಿಂದ (ರೂ.16,331/- ಚೆಕ್ ಸಂಖ್ಯೆ: 5853480 ಮತ್ತು ರೂ.6,650/- ಚೆಕ್ ಸಂಖ್ಯೆ: 583474) ಒಟ್ಟು ರೂ.22,981/- ಹಣವನ್ನು ತಮ್ಮ ಸ್ವಂತ ಹೆಸರಿಗೆ ಚೆಕ್ ಮೂಲಕ ನೀರು ನಿರ್ವಹಣೆ ಕೆಲಸಕ್ಕಾಗಿ ಹಣ ತೆಗೆದುಕೊಂಡಿದ್ದೇನೆಂದು ಒಪ್ಪಿಕೊಂಡಿರುತ್ತಾರೆಂದು ಆಳಂದ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುವುದರಿಂದ ಸದರಿಯವರ ವಿರುದ್ದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43 (ಎ) ಮತ್ತು 48(4) ರನ್ವಯ ಕ್ರಮಕ್ಕಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43-ಎ ಮತ್ತು 48(4) ರ ಅಡಿಯಲ್ಲಿ ಕ್ರಮ ವಹಿಸುವ ಪೂರ್ವದಲ್ಲಿ ನಿಯಮಾನುಸಾರ ಕಾರಣ ಕೇಳುವ ನೋಟಿಸ್ಸನ್ನು ದಿನಾಂಕ: 14.02.2017 ರಂದು ಜಾರಿ ಮಾಡಲಾಗಿರುತ್ತದೆ. ಸದರಿಯವರು ದಿನಾಂಕ:28.02.2017 ರಂದು ಕಾರಣ ಕೇಳುವ ನೋಟಿಸ್ಸಿಗೆ ಉತ್ತರ ಸಲ್ಲಿಸಿರುತ್ತಾರೆ.

ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ, ಉಪಾಧ್ಯಕ್ಷರು ತಮ್ಮ ಲಿಖಿತ ಹೇಳಿಕೆಯಲ್ಲಿ ದೇವರ ಹೆಸರಿನಲ್ಲಿ ಹಣೆ ಮಾಡಿ, ಅವರು ಯಾವುದೇ ರೀತಿಯ ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದಿಲ್ಲವೆಂದು, ಗ್ರಾಮ ಪಂಚಾಯತ್ ಸದಸ್ಯರು ಅವರ ಮೇಲಿನ ವೈಯಕ್ತಿಕ ರಾಜಕೀಯ ವೈಷಮ್ಯದಿಂದ ದೂರು ಕೊಟ್ಟಿರುತ್ತಾರೆಂದು, ಮಾದನಹಿಪ್ಪರಗಾ ಗ್ರಾಮ, ಬರ ಪೀಡಿತ ಪ್ರದೇಶವಾಗಿರುವುದರಿಂದ ಜನರ ಅನುಕೂಲಕ್ಕಾಗಿ ಹಾಗೂ ನೀರಿನ ಬರ ನಿರ್ವಹಣೆ ಹೋಗಲಾಡಿಸುವ ಸಲುವಾಗಿ ಸುಮಾರು 500 ಮನೆಗಳಿಗೆ ನೀರಿನ ಅನುಕೂಲತೆಯನ್ನು ಮಾಡಿಕೊಟ್ಟಿರುವುದಾಗಿ, ಅದಕ್ಕಾಗಿ ಗ್ರಾಮ ಪಂಚಾಯಿತಿಯ ತೆರಿಗೆ ಮತ್ತು ನೀರು ನಿರ್ವಹಣೆ ಖಾತೆಯಿಂದ ಪಡೆದ ಹಣವನ್ನು ಬೋರ್‌ವೆಲ್ ಕಾಮಗಾರಿ ಮಾಡಿದವರಿಗೆ 22,981/- ಗಳನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಬೋರ್‌ವೆಲ್ ಕಾಮಗಾರಿ ಮಾಡಿದವನ ಬ್ಯಾಂಕ್ ಖಾತೆ ಇಲ್ಲದ ಕಾರಣ ನನ್ನ ಖಾತೆಗೆ ಅವರ ಬಿಲ್‌ನ್ನು ಹಾಕಿ ಹಣ ತೆಗೆದು ನೇರವಾಗಿ ಪಾವತಿಸಿರುವುದಾಗಿ, ಬೋರ್‌ವೆಲ್ ಕಾಮಗಾರಿ ಮಾಡಿದವನ ಲಿಖಿತ ಹೇಳಿಕೆ ಹಾಗೂ ಬಿಲ್‌ಗಳನ್ನು ಪತ್ರದೊಂದಿಗೆ ಲಗತ್ತಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿಯವರಿಗೆ ಚೆಕ್‌ನ್ನು ಅವರ ಖಾತೆಗೆ ಹಾಕಿ ಕೊಳ್ಳಬಾರದೆಂಬ ವಿಚಾರ ತಿಳಿಯದಿದ್ದ ಕಾರಣ ಈ ರೀತಿ ಮಾಡಿದ್ದಾಗಿ, ದಯವಿಟ್ಟು ಈ ವಿಚಾರವಾಗಿ ಒಮ್ಮೆ ಕ್ಷಮೆ ನೀಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:13.03.2017 ರಂದು ಮುಖ್ಯಕಾರ್ಯನಿರ್ವಾಹಕ ಅಧಿಕಾರಿಯವರ ವರದಿ ಹಾಗೂ ಸದರಿಯವರು ನೀಡಿರುವ ಲಿಖಿತ ಹೇಳಿಕೆಯನ್ನು ಪರಿಶೀಲಿಸಿ, ಸರ್ಕಾರವು ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಪರಿಶೀಲಿಸಿ, ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ ರವರು ಕಾನೂನು ಬಾಹಿರವಾಗಿ ಗ್ರಾಮ ಪಂಚಾಯಿತಿಯ ನೀರು ಸರಬರಾಜು ಮತ್ತು ನೀರು ನಿರ್ವಹಣೆ ಖಾತೆಯಿಂದ ಒಟ್ಟು ರೂ.22,981/- ಹಣವನ್ನು ತಮ್ಮ ಸ್ವಂತ ಹೆಸರಿಗೆ ಚೆಕ್ ಮೂಲಕ ಹಣ ತೆಗೆದುಕೊಂಡಿರುವುದನ್ನು ಸರ್ಕಾರವು ಮನದಟ್ಟುಮಾಡಿಕೊಂಡು, ಸದರಿಯವರು ಕರ್ತವ್ಯ ಲೋಪವೆಸಗಿರುವುದು ಕಂಡು ಬಂದಿರುವುದರಿಂದ ಸರ್ಕಾರವು ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ತೆಗೆದು ಹಾಕಲು ನಿರ್ಣಯಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/891/ಗ್ರಾಪಂಅ/2016**

**ಬೆಂಗಳೂರು, ದಿನಾಂಕ:-31-03-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ, ಉಪಾಧ್ಯಕ್ಷರು, ಮಾದನಹಿಪ್ಪರಗಾ ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ, ಇವರು ಕಾನೂನು ಬಾಹಿರವಾಗಿ ಗ್ರಾಮ ಪಂಚಾಯಿತಿಯ ನೀರು ಸರಬರಾಜು ಮತ್ತು ನೀರು ನಿರ್ವಹಣೆ ಖಾತೆಯಿಂದ ಒಟ್ಟು ರೂ.22,981/- ಹಣವನ್ನು ತಮ್ಮ ಸ್ವಂತ ಹೆಸರಿಗೆ ಚೆಕ್ ಮೂಲಕ ಹಣ ತೆಗೆದುಕೊಂಡಿರುವುದು ರುಜುವಾತಾಗಿರುವುದರಿಂದ ಇವರನ್ನು ಮಾದನಹಿಪ್ಪರಗಾ ಗ್ರಾಮ ಪಂಚಾಯತಿ ಉಪಾಧ್ಯಕ್ಷ ಸ್ಥಾನ ಹಾಗೂ ಸದಸ್ಯತ್ವ ಎರಡನ್ನೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ತೆಗೆದು ಹಾಕಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

(ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್)
ಗ್ರಾಅಪ ಇಲಾಖೆ ರವರಿಂದ ಅನುಮೋದಿತ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮುಖ್ಯಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಕಲಬುರಗಿ ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
3. ಶ್ರೀ ಶ್ರೀ ಪರಮೇಶ್ವರ್ ತಂದೆ ಗುರಪ್ಪ ಮಾಶ್ಯಾಳಕರ, ಉಪಾಧ್ಯಕ್ಷರು, ಮಾದನಹಿಪ್ಪರಗಾ ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಮಾದನಹಿಪ್ಪರಗಾ ಗ್ರಾಮ ಪಂಚಾಯತಿ, ಆಳಂದ ತಾಲ್ಲೂಕು, ಕಲಬುರಗಿ ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.